ಸಂಧ್ಯೋಪಾಸನ ಪದ್ಧತಿ

*

ಪ್ರಕಾಶಕರು
ಪರಕ್ಕಜೆ, ಶಂಭು ಭಟ್ಟ

1953

ಬೆಲೆ ೦—೬—೦

ಬೋಧಾಯನೀಯ
ಸಂಧ್ಯೋಪಾಸನ ಪದ್ಧತಿ

ಪ್ರಕಾಶಕರು
ಪರಕ್ಕಜೆ, ಶಂಭು ಭಟ್ಟ.

1953

ವಿಚಾರ

"ಅಹರಹಃ ಸಂಧ್ಯಾಮುಪಾಸೀತ" ಎಂಬ ಶ್ರುತಿವಚನವು "ಪ್ರತಿ ದಿನವೂ ಸಂಧ್ಯೋಪಾಸನೆಮಾಡಬೇಕು" ಎಂದು ವಿಧಿಸುತ್ತದೆ. "ಸಂಧ್ಯಾ ಹೀನೋಽಶುಚಿರ್ನಿತ್ಯಮನರ್ಹಃ ಸರ್ವ ಕರ್ಮಸು" (ದಕ್ಷಃ) "ಅನ್ಯಕರ್ಮ ಫಲಂನಾಸ್ತಿ ಸಂಧ್ಯಾಹೀನೇಽಶುಚಿತ್ವತಃ" (ಧರ್ಮಸಿಂಧುಃ) ಇತ್ಯಾದಿ ವಚನಗಳು, ಸಂಧ್ಯೋಪಾಸನೆಯನ್ನು ಮಾಡದಿರುವವನು ಅಶುದ್ಧನಾಗಿ ಸರ್ವ ಕರ್ಮಗಳಿಗೂ ಅಯೋಗ್ಯನಾಗುವನು; ಸಂಧ್ಯಾವಂದನೆಯನ್ನು ಮಾಡದೆ ಬೇರೆ ಯಾವ ಕರ್ಮವನ್ನು ಮಾಡಿದರೂ ಆ ಕರ್ಮದ ಫಲವು ಅವನಿಗೆ ಲಭಿಸದು, ಎಂದು ಹೇಳುತ್ತವೆ. ಅದುಕಾರಣ ದ್ವಿಜನಾದವನು ಪ್ರತಿದಿನವೂ ಸಂಧ್ಯೋಪಾಸನೆಯನ್ನು ಮಾಡಲೇಬೇಕು

"ಉಪಾಸ್ತೇ ಸಂಧಿವೇಲಾಯಾಂ ನಿಶಾಯಾ ದಿವಸಸ್ಯಚ" ತಾಮೇವ ಸಂಧ್ಯಾಂತಸ್ಮಾತ್ಪ್ರವದಂತಿ ಮನೀಷಿಣಃ "(ವ್ಯಾಸಃ) ಹಗಲು ರಾತ್ರಿಗಳ ಸಂಧಿಕಾಲಗಳಲ್ಲಿ ಆದಿತ್ಯಮಂಡಲಾಂತರ್ಗತನಾದ ಯಾವ ಚಿಚ್ಛಕ್ತಿ ದೇವತೆಯನ್ನು ದ್ವಿಜರು ಉಪಾಸನೆಮಾಡುತ್ತಾರೋ ಅದನ್ನೇ--ಆ ದೇವತೋಪಾಸನೆಯನ್ನೇ ಸಂಧ್ಯೋಪಾಸನೆ, ಸಂಧ್ಯಾವಂದನೆಎಂದು ಹೇಳುತ್ತಾರೆ

"ಉತ್ತಮೇಶಿಖರೇ ಜಾತೇಭೂಮ್ಯಾಂ ಪರ್ವತಮೂರ್ಧನಿ" (ತೈ. ಆ. ಪ್ರಪಾ. ೧೦. ಅನು ೩೬) "ಯಾಸಾ ಸಂಧ್ಯಾಬ್ರಹ್ಮಸುತಾ ಮನೋಜಾತಾ ಪುರಾಽಭವತ್" (ದೇವೀಪುರಾಣ) "ಸುಮೇರುಮಧ್ಯಶೃಂಗಸ್ಥಾ" "ಭಾನುಮಂಡಲಮಧ್ಯಸ್ಥಾ" (ಲಲಿತಾ ಸಹಸ್ರನಾಮ) ಇತ್ಯಾದಿ ವಚನಗಳು ಈ ಸಂಧ್ಯಾದೇವಿಯು ಬ್ರಹ್ಮನ ಮಾನಸಪುತ್ರಿಯಾಗಿ ಮೇರುಪರ್ವತದ ಮಧ್ಯ ಶಿಖರದಲ್ಲಿರುವಳೆಂದೂ, ಸೂರ್ಯಮಂಡಲ ಮಧ್ಯದಲ್ಲಿರುವಳೆಂದೂ ಹೇಳುತ್ತವೆ. ಈ ದೇವತೆಯನ್ನೇ "ಗಾಯತ್ರೀವ್ಯಾಹೃತಿಃ ಸಂಧ್ಯಾದ್ವಿಜಬೃಂದ ನಿಷೇವಿತಾ" (ಲಲಿತಾ ಸಹಸ್ರನಾಮ) ಗಾಯತ್ರೀಎಂದೂ ವ್ಯಾಹೃತಿಎಂದೂ, ಸಂಧ್ಯಾ ಎಂದೂ ಹೇಳುವರು. ದ್ವಿಜರು ಉದಯಾಸ್ತ ಕಾಲಗಳಲ್ಲಿ ವಂದಿಸುವುದು ಈ ದೇವತೆಯನ್ನೇ ಆಗಿದೆ. ಈ ಸಂಧ್ಯೋಪಾಸನೆಯನ್ನು ಕಾಲಕ್ಕೆ ಸರಿಯಾಗಿ ಮಾಡುತ್ತಾ ಇದ್ದರೆ "ಸ್ತುತೋಮಯಾ ವರದಾವೇದಮಾತಾ ಪ್ರಚೋದಯಂತೀ ಪವನೇ ದ್ವಿಜಾತಾ। ಆಯುಃ ಪೃಥಿವ್ಯಾಂ ದ್ರವಿಣಂ

ಬ್ರಹ್ಮವರ್ಚಸಂ ಮಹ್ಯಂದತ್ವಾ" (ತೈ. ಆ. ಪ್ರಪಾ. ೧೦ ಅನು ೩೬) ಎಂಬ ವೇದವಾಕ್ಯದಂತೆ ಪ್ರಾಣವಾಯುವಿನಂತೆ ಅಂತರ್ಯಾಮಿ ರೂಪದಿಂದ ಸಮಸ್ತ ಪ್ರಾಣಿಗಳನ್ನು ಪ್ರೇರಿಸುವವಳೂ ವೇದಮಾತೆಯೂ ಆಗಿರುವ ಆ ದೇವಿಯು ನಮಗೆ ಆಯುಸ್ಸನ್ನೂ ಸಂಪತ್ತನ್ನೂ ಬ್ರಹ್ಮವರ್ಚಸ್ಸನ್ನೂ ಸಮಸ್ತ ಇಷ್ಟಾರ್ಥವನ್ನೂ ಕೊಡುವಳು.

ಸಂಧ್ಯೆಯು ಎರಡು.

"ಸಂಧೌ ಸಂಧ್ಯಾಮುಪಾಸೀತಾಽಽ ಜ್ಯೋತಿಷೋದರ್ಶನಾತ್ ಸಂಧಿಃ" "ಉದ್ಯಂತಮಸ್ತಂ ಯಂತಮಾದಿತ್ಯಮಭಿಧ್ಯಾಯನ್ ಕುರ್ವನ್ ಬ್ರಾಹ್ಮಣೋ ವಿದ್ವಾನ್ ಸಕಲಂ ಭದ್ರಮಶ್ನುತೇ" (ತೈ. ಆ. ಪ್ರಪಾ೨. ಅನು೨) "ಹಗಲು ಕಳೆದು ರಾತ್ರಿ ಬರುವ ಸಂಧಿ ಎಂದರೆ ಸೂರ್ಯನು ಅರ್ಧಾಸ್ತಮಾನವನ್ನು ಹೊಂದುವ ಕಾಲದಲ್ಲಿ ಸಾಯಂ ಸಂಧ್ಯೋಪಾಸನೆಯನ್ನೂ ರಾತ್ರಿ ಕಳೆದು ಹಗಲುಬರುವ ಸಂಧಿ ಎಂದರೆ ಸೂರ್ಯೋದಯಕ್ಕಿಂತ ಮೂರು ಘಳಿಗೆ ಮೊದಲು ಆರಂಭಿಸಿ ಸೂರ್ಯೋದಯವರೆಗಿನ ಕಾಲದಲ್ಲಿ ಪ್ರಾತಃ ಸಂಧ್ಯೋಪಾಸನೆಯನ್ನೂ ಮಾಡತಕ್ಕದ್ದು. ಹೀಗೆ ಅಸ್ತಮಾನಹೊಂದುವ ಉದಯಿಸುವ ಸೂರ್ಯನನ್ನು 'ಬ್ರಹ್ಮ'ಎಂದು ತಿಳಿದು ಯಾವನು ಧ್ಯಾನಾದಿಗಳನ್ನು ಮಾಡುವನೋ ಅವನು ಸಕಲಶ್ರೇಯಸ್ಸನ್ನು ಪಡೆಯುವನು." ಎಂಬ ವಚನಗಳಿಂದಲೂ, ಆಪಸ್ತಂಬ, ಆಶ್ವಲಾಯನ, ಬೋಧಾಯನ ಸೂತ್ರಗಳಿಂದಲೂ, ವಿದ್ಯಾರಣ್ಯ ಮೊದಲಾದವರ ವಾಕ್ಯಗಳಿಂದಲೂ, ಸಾಯಂ ಪ್ರಾತಃಕಾಲಗಳಲ್ಲಿಯೇ ಸಂಧ್ಯೋಪಾಸನೆಮಾಡುವುದು ಮುಖ್ಯವಾಗಿದೆ. ಸಂಧ್ಯಾಕಾಲಗಳೆಂದರೆ ಸಾಯಂಪ್ರಾತಃಕಾಲಗಳೆರಡೇ ಮುಖ್ಯವಾದವುಗಳು. ಪ್ರಧಾನವಾದ ಈ ಎರಡು ಕಾಲಗಳಲ್ಲಿ ಸಂಧ್ಯಾವಂದನೆಮಾಡಲು ಅವರವರ ಪರಿಸ್ಥಿತಿಯು ಮೂಲಕ ಒಂದು ವೇಳೆ ಸಾಧ್ಯವಾಗದಿದ್ದರೂ, ಆ ಮುಖ್ಯ ಕಾಲದ ನಂತರವಾದರೂ ದಿನದಲ್ಲಿ ಎರಡು ಹೊತ್ತು ಸಂಧ್ಯಾವಂದನೆ ಮಾಡಲೇಬೇಕೆಂದು ಶಾಸ್ತ್ರಸಿದ್ಧಾಂತವಾಗಿರುವುದು.

ಪ್ರಾತಃ ಸಾಯಂಕಾಲಗಳಲ್ಲೇ ಜಗತ್ತಿನ ಪ್ರಕೃತಿಯು ಬದಲಾಗುವುದೂ, ಆ ಕಾಲಗಳಲ್ಲೇ ಸಮಸ್ತಚರಾಚರ ಪ್ರಾಣಿಗಳ ವ್ಯವಹಾರಗಳು ಪರಿವರ್ತನವಾಗುವುದೂ ನಮಗೆ ಪ್ರತ್ಯಕ್ಷತಃ ಕಂಡುಬರುವುದು. ಪ್ರಾತಃಕಾಲದಲ್ಲಿ ಕೋಳಿಕೂಗುತ್ತದೆ. ಕೋಗಿಲೆ ಹಾಡುತ್ತದೆ. ಇನ್ನಿತರ ಪಕ್ಷಿ

ಗಳು ಚಿಲಿಪಿಲಿಗುಟ್ಟುವವು. ಹೂಗಳೂ, ಎಲೆಗಳೂ ಅರಳುವವು. ಮೃಗ ಗಳು ತಮ್ಮ ವ್ಯವಹಾರಕ್ಕೆ ತೊಡಗುವವು. ತಂಗಾಳಿಯು ಮೆಲ್ಲಮೆಲ್ಲನೆ ಬೀಸುವುದು. ಮೂಡಣ ದಿಕ್ಕು ಕೆಂಪಾಗಿ ಕಾಣುವುದು. ಇತ್ಯಾದಿ.

ಸಾಯಂಕಾಲದಲ್ಲಿಯೂ ಹೀಗೆಯೇ ಗಾಳಿ ಬೀಸುವುದು. ಪಡು ದಿಕ್ಕಿನಲ್ಲಿ ಬಣ್ಣಬದಲುವುದು. ಪಕ್ಷಿಗಳು ಕೂಗುತ್ತಾ ಗೂಡನ್ನು ಪ್ರವೇ ಶಿಸುವವು. ಕೆಲವು ಮರಬಳ್ಳಿಗಳ ಎಲೆಗಳು ಮುಚ್ಚಿಕೊಳ್ಳುವವು. ಕೆಲವು ಜಾತಿಯ ಹೂಗಳು ಅರಳುವವು. ಮೃಗಗಳೂ, ಪಕ್ಷಿಗಳೂ ತಮ್ಮ ಸ್ಥಾನ ವನ್ನು ಸೇರುವವು. ರಾತ್ರಿಯಲ್ಲಿ ಸಂಚರಿಸುವ ಮೃಗಗಳೂ ಪಕ್ಷಿಗಳೂ ತಮ್ಮ ತಮ್ಮ ವ್ಯವಹಾರಗಳಲ್ಲಿ ತೊಡಗುವವು. ಈ ಪ್ರಕಾರ ವಿಚಾರಿ ಸಿದರೆ ಈ ಎರಡು ಕಾಲಗಳಲ್ಲಿಯೂ ಪ್ರಕೃತಿಯೇ ಬದಲಾಗುತ್ತಿದ್ದು, ಸಮಸ್ತಚರಾಚರ ಪ್ರಾಣಿಗಳು ಈ ಎರಡು ಕಾಲಗಳಲ್ಲಿಯೂ ನಿಯತ ವಾಗಿ ಒಂದು ರೀತಿಯಿಂದ ಸಂಧ್ಯಾ ದೇವತೆಯನ್ನೇ ಸೇವೆಮಾಡು ತ್ತವೋ—ಉಪಾಸನೆಮಾರುತ್ತವೋ ಎಂದು ತೋರುತ್ತದೆ. ಇದೇ ಅರ್ಥವನ್ನೇ—

ಯಾಂಸದಾಸರ್ವಭೂತಾನಿ ಸ್ಥಾವರಾಣಿ ಚರಾಣಿಚ । ಸಾಯಂಪ್ರಾ ತರ್ನಮಸ್ಯಂತಿಸಾ ಮಾ ಸಂಧ್ಯಾಽಭಿರಕ್ಷತು ॥ ಸಕಲ ಸ್ಥಿರಚರಪ್ರಾಣಿ ಗಳು ನಿತ್ಯವೂ ಯಾವ ದೇವತೆಯನ್ನು ಸಾಯಂಪ್ರಾತಃಕಾಲಗಳಲ್ಲಿ ವಂದಿಸು ವವೋ ಆ ಸಂಧ್ಯಾದೇವಿಯು ನಮ್ಮನ್ನು ರಕ್ಷಿಸಲಿ. ಎಂಬ ವಚನವೂ ಹೇಳುತ್ತದೆ. ಪ್ರಶಾಂತವೂ ಮನೋಹರವೂ, ಆನಂದದಾಯಕವೂ ಆಗಿ ರುವ ಈ ಎರಡು ಕಾಲಗಳಲ್ಲಿ ಸಕಲ ಪ್ರಾಣಿಗಳೂ ತಮ್ಮ ತಮ್ಮ ನಿಯಮ ಗಳನ್ನು ಪಾಲಿಸುತ್ತಿದ್ದು ಸಂಧ್ಯೋಪಾಸನೆಮಾಡುತ್ತಿರುವಾಗ, ಮನುಷ್ಯಜನ್ಮ ದಲ್ಲಿ ಬಂದು ಅದರಲ್ಲಿಯೂ ಬ್ರಾಹ್ಮಣರಾಗಿರುವ (ದ್ವಿಜರು) ನಾವು ತಲ್ಪಾ ಧೀನರಾಗಿ ಬೆಳಗ್ಗೆ ಎಂಟು ಗಂಟೆ ವರೆಗೂ ನಿದ್ರಾದೇವಿಯನ್ನು ಉಚ್ಚಸ್ವರ ದಿಂದ "ಗೊರಕೆಮಂತ್ರವನ್ನು" ಹೇಳುತ್ತಾ ಉಪಾಸನೆಮಾಡುವುದು, ಸಾಯಂ ಕಾಲದಲ್ಲಿ ವಿಲಾಸ, ವಿಹಾರಗಳಲ್ಲೂ, ಉಪಾಹಾರಗೃಹಗಳಲ್ಲಿಯೂ ಆಸಕ್ತ ರಾಗಿರುವುದೆಂಬುದು ನಮಗೇ ಎಷ್ಟು ಲಜ್ಜಾಸ್ಪದವೆಂಬುದನ್ನು ಜನರೇ ಊಹಿಸಿ ಕೊಳ್ಳಲಿ. ನಮ್ಮನ್ನು ನಾವೇ ಪಶುಪಕ್ಷಿ ವೃಕ್ಷಲತಾದಿಗಳಿಗಿಂತಲೂ,ಕೀಳಾಗಿ ಮಾಡಿಕೊಂಡಂತಾಯಿತಲ್ಲವೇ? ಆದ್ದರಿಂದ ಬ್ರಾಹ್ಮಣನಾದವನು (ದ್ವಿಜನು)

ಪ್ರತಿದಿನವೂ[1] ಹಗಲುರಾತ್ರಿಗಳಲ್ಲಿ ತನಗೆ ತಿಳಿದು ಅಥವಾ ತಿಳಿಯದೆ ತನ್ನಿಂದ ಘಟಿಸುವ ಸಮಸ್ತಪಾಪಗಳ ಪರಿಹಾರಕ್ಕಾಗಿಯೂ, ಬ್ರಹ್ಮವರ್ಚಸ್ಸನ್ನು ಪಡೆದುಕೊಂಡು, ಬ್ರಾಹ್ಮಣ್ಯವನ್ನು ರಕ್ಷಿಸಿಕೊಳ್ಳುವುದಕ್ಕಾಗಿಯೂ *'ಬ್ರಹ್ಮೈವಸನ್‌ಬ್ರಹ್ಮಾಪ್ಯೇತಿ' ಎಂಬ ವೇದವಚನದಂತೆ ಬ್ರಹ್ಮಸಾಯುಜ್ಯರೂಪ ಮೋಕ್ಷಪ್ರಾಪ್ತಿಗಾಗಿ ನಿತ್ಯವೂ ಎರಡು ಸಂಧ್ಯಾಕಾಲಗಳಲ್ಲಿಯೂ ಸಂಧ್ಯೋಪಾಸನೆಯನ್ನು ಅವಶ್ಯವಾಗಿ ಮಾಡಲೇಬೇಕಾಗುವುದು.

ಹಿಂದೆ ಹೇಳಿದಂತೆ ಎರಡು ಸಂಧ್ಯಾಕಾಲಗಳೇ ಪ್ರಧಾನವಾಗಿದ್ದರೂ ಪೂರ್ವಾಹ್ಣಾಪರಾಹ್ಣಗಳ ಸಂಧಿಯಾದ ಮಧ್ಯಾಹ್ನ ಕಾಲವೂ ಒಂದು ಸಂಧಿಕಾಲವೆಂದು ಮತ್ತೆ ಕಲ್ಪನೆಯುಂಟಾಯಿತು. ವೇದದಲ್ಲಿ "ಋಗ್ಭಿಃ ಪೂರ್ವಾಹ್ಣೇದಿವಿದೇವ ಈಯತೇ ॥ ಯಜುರ್ವೇದೇತಿಷ್ಠತಿ ಮಧ್ಯೇ ಅಹ್ನಃ ॥ ಸಾಮವೇದೇನಾಸ್ತಮಯೇ ಮಹೀಯತೇ॥" "ಸೂರ್ಯನು ಉದಯಕಾಲಕ್ಕೆ ಋಗ್ವೇದಸ್ವರೂಪನಾಗಿಯೂ, ಮಧ್ಯಾಹ್ನದಲ್ಲಿ ಯಜುರ್ವೇದಸ್ವರೂಪನಾಗಿಯೂ, ಅಸ್ತಮಾನಕಾಲದಲ್ಲಿ ಸಾಮವೇದಸ್ವರೂಪನಾಗಿಯೂ ಇರುವನು." ಎಂದು ಹೇಳಿದ್ದರಿಂದಲೋ ಏನೋ ಮಧ್ಯಾಹ್ನವನ್ನು ಸಂಧ್ಯಾಕಾಲವೆಂದು ತಿಳಿದುಕೊಂಡಿರಬಹುದು. ಈ ಕಾರಣದಿಂದಲೇ ಈಗ 'ತ್ರಿಸಂಧ್ಯೆ' "ಮುಸ್ಸಂಜೆ" ಎಂಬ ವ್ಯವಹಾರವೂ ಬಂದಿರುತ್ತದೆ. ಮತ್ತು ಸ್ಮೃತಿಕಾರರೆಲ್ಲರೂ ಮಧ್ಯಾಹ್ನ ಸಂಧ್ಯೆಯನ್ನೂ ಮಾಡಬೇಕೆಂದು ಹೇಳಿರುವರು. ಶಿಷ್ಟಾಚಾರವೂ ಹಾಗೆಯೇ ಕಂಡುಬರುತ್ತದೆ.

ಈ ಎಲ್ಲ ವಿಚಾರಗಳಿಂದ ತಾನು ಬ್ರಾಹ್ಮಣನೆಂದೆನಿಸಿಕೊಂಡಿರಬೇಕಿದ್ದರೆ ಸಂಧ್ಯಾವಂದನೆಯನ್ನು ಮಾಡಲೇಬೇಕೆಂಬುದು ಸಿದ್ಧವಾಗುವುದು.

---

1. "ಯದಹ್ನಾತ್ ಕುರುತೇ ಪಾಪಂತದಹ್ನಾತ್ ಪ್ರತಿಮುಚ್ಯತೇ' ॥ ಯದ್ರಾತ್ರಿಯಾತ್ ಕುರುತೇ ಪಾಪಂತದ್ರಾತ್ರಿಯಾತ್ ಪ್ರತಿಮುಚ್ಯತೇ ॥ "

೧. ತೈ. ಆ. ಪ್ರಪಾ. ೧೦. ಅನು. ೩೪.
*ತೈ. ಆ. ಪ್ರಪಾ೨. ಅನು ೨.)

೨. "ಬ್ರಹ್ಮವರ್ಚಸಂ ಮಹ್ಯಂ ದತ್ವಾ" (ವೇದ) ತೈ. ಆ. ಪ್ರಾಪಾ.೧೦. ಅನು ೩೬.

೩. "ಸಂಧ್ಯಾಂನೋಪಾಸತೇವಿಪ್ರಾಃಕಥಂತೇ ಬ್ರಾಹ್ಮಣಾಃಸ್ಮೃತಾಃ" (ಬೋಧಾಯನ)

ಆದರೆ ನಮ್ಮಲ್ಲಿ ಪ್ರಚಾರದಲ್ಲಿರುವ ಸಂಧ್ಯೋಪಾಸನ ಪದ್ಧತಿಯು ಈಗಿನ ಕಾಲಕ್ಕೆ ಬಹು ದೊಡ್ಡದಾಗಿರುವುದರಿಂದ ಗದ್ದೆ, ತೋಟವಗೈರೆಗಳ ಕೃಷಿಯನ್ನೂ, ಇನ್ನಿತರ ಲೌಕಿಕ ವ್ಯವಹಾರಗಳನ್ನೂ ಸ್ವತಃ ನಿರ್ವಹಿಸಿ ಕೊಂಡುಬರುವ ಸಾಮಾನ್ಯ ಜನರಿಗೂ, ಪಟ್ಟಣಗಳಲ್ಲಿ ವಾಸಮಾಡಿಕೊಂಡು ಕಲಿಯುವ ವಿದ್ಯಾರ್ಥಿಗಳಿಗೂ, ಮತ್ತು ಎಂಟುವರ್ಷಪ್ರಾಯದಲ್ಲೇ ಉಪನಯನವಾದ ಸಣ್ಣ ಹುಡುಗರಿಗೂ ಈ ದೊಡ್ಡ ಸಂಧ್ಯಾವಂದನೆಯನ್ನು ಮಾಡಲು ಅಸಾಧ್ಯವಾಗಿದೆ. ಈಗ ಇರುವ ಸಂಧ್ಯೋಪಾಸನ ಪದ್ಧತಿಯು ಈಗಿನ ದೇಶ ಕಾಲಪರಿಸ್ಥಿತಿಗೆ ಅತಿ ದುಷ್ಕರವೇ ಸರಿ. ಹೀಗೆ ಬಹು ಜನರು ಅಭಿಪ್ರಾಯ ಪಡುವರು. ಇಷ್ಟೇ ಅಲ್ಲ, ಕೆಲವರು "ಸಂಕ್ಷಿಪ್ತವಾದ ಒಂದು ಸಂಧ್ಯೋಪಾಸನ ಪದ್ಧತಿಯನ್ನು ತಯಾರಿಸಬೇಕೆಂದು" ನಮ್ಮೊಡನೆ ಹೇಳಿದರು. ಅವರ (ಜನತೆಯ) ಈ ಅಭಿಪ್ರಾಯವನ್ನು ಕೆಲವು ಮಟ್ಟಿಗಾದರೂ ಅಂಶತಃ ಒಪ್ಪಿಕೊಳ್ಳಬೇಕಾಗಿದೆ.

ಅದು ಕಾರಣ ಬೋಧಾಯನ ಸೂತ್ರವೇ ಮೊದಲಾದ ಅನೇಕ ಗ್ರಂಥಗಳನ್ನು ಪರಿಶೀಲಿಸಿ ನಮ್ಮ ಶಿಷ್ಟಾಚಾರವನ್ನು ಅನುಸರಿಸಿ ಸಂಧ್ಯಾಲೋಪವಾಗದಂತೆ ಶಾಸ್ತ್ರಾನುಸಾರಿಯಾದ ಈ "ಬೋಧಾಯನೀಯ ಸಂಧ್ಯೋಪಾಸನ ಪದ್ಧತಿಯು ಬರೆಯಲ್ಪಟ್ಟಿದೆ. ಈ ಬಗ್ಗೆ ದೈವಜ್ಞರತ್ನ ಬ್ರ। ವೇ। ಯಮುರ್ಗುಂಜ ಶಂಕರ ಜೋಯಿಸರು ನಮಗೆ ಕೆಲವು ಹಿತಸೂಚನೆಗಳನ್ನೂ ಕೊಟ್ಟಿರುವರು.

ಈ ಪುಸ್ತಕದಲ್ಲಿ ವಿಶೇಷವಾಗಿ ಉಪವೀತ ಧಾರಣವಿಧಿ, ಭೋಜನ ವಿಧಿ, ಮತ್ತು ಉಪನಯನ ಕಾಲದಿಂದ ಮೂರು ದಿನಗಳ ವರೆಗೆ ವಟುವಿನಿಂದ ಅವಶ್ಯವಾಗಿ ಮಾಡಿಸತಕ್ಕ ಅಗ್ನಿಕಾರ್ಯವಿಧಿಯನ್ನೂ, ಈಗ ನಮ್ಮಲ್ಲಿ ಪ್ರಚಾರದಲ್ಲಿರುವ ಎಲ್ಲಾ ಗೋತ್ರಗಳ ಪ್ರವರ ಋಷಿಗಳನ್ನೂ ಕೊಡೋಣಾಗಿದೆ. ಕರನ್ಯಾಸ, ಅಂಗನ್ಯಾಸ, ಗಾಯತ್ರೀಮುದ್ರೆ ಮೊದಲಾದುವು ಪುರಶ್ಚರಣಕ್ಕೆ ಮಾತ್ರ ಅವಶ್ಯವಲ್ಲದೆ ನಿತ್ಯಾನುಷ್ಠಾನಕ್ಕೆ ಅವಶ್ಯವಿಲ್ಲವೆಂದು ಪ್ರಮಾಣವಿರುವುದರಿಂದ ಅವುಗಳನ್ನು ಬರೆಯಲಿಲ್ಲ.

ಅಷ್ಟಾಕ್ಷರೀ, ಪಂಚಾಕ್ಷರೀ ಜಪವನ್ನು ಬರೆಯಲಾಗಿದೆ. ವೆಂಕಟೇಶೀಯ ಪ್ರಯೋಗ ಮಾಲೆಯಲ್ಲಿ ಈ ಅಷ್ಟಾಕ್ಷರೀ ಪಂಚಾಕ್ಷರೀ ಜಪವು ಕೇವಲ ಶಿಷ್ಟಾಚಾರ ಪ್ರಾಪ್ತವಾದದ್ದೆಂದು ಬರೆದಿರುವುದರಿಂದ ಈ ವರೆಗೆ

ಎಲ್ಲರೂ ಹಾಗೆಯೇ ತಿಳಿದುಕೊಂಡಿದ್ದರು. ಅಷ್ಟೇ ಅಲ್ಲ, ಗೋಕರ್ಣ ಪ್ರಯೋಗದಲ್ಲಿ (ಬೋಧಾಯನೀಯಗೃಹ್ಯ ಕರ್ಮಸಮುಚ್ಚಯ) ಸಹ ಶಿಷ್ಟಾಚಾರವೆಂದೇ ಬರೆದಿದ್ದರು. ಹೀಗೆಯೇ ಗ್ರಂಥಾವಲೋಕನಮಾಡುತ್ತಿರುವಾಗ ಅಷ್ಟಾಕ್ಷರೀ ಪಂಚಾಕ್ಷರೀ ಜಪಕ್ಕೆ ಪ್ರಮಾಣವು ಧರ್ಮಶಾಸ್ತ್ರದಲ್ಲಿ ಕಂಡುಬರುತ್ತದೆ. ಆದರೆ ಅವುಗಳನ್ನು ಉಪನಯನವಾಗಿ ಐದನೇ ದಿನ ತಂದೆಯಿಂದ ಉಪದೇಶಪಡೆದುಕೊಳ್ಳಬೇಕೆಂದು ಹೇಳಿದೆ. ಸ್ಮೃ. ಸಾ. ನಿ. ಪ್ರ. ಉ. ಶ್ಲೋ ೮೦. ನಮ್ಮಲ್ಲಿ ಈಗ ಉಪನಯನ ದಿವಸವೇ ಉಪದೇಶಿಸುವ ಪದ್ಧತಿಯು ಇದೆ. ಇಷ್ಟೇ ವ್ಯತ್ಯಾಸ. ಸಂಧ್ಯಾವಂದನೆಮಾಡುವಾಗ ಗಾಯತ್ರೀ, ಅಷ್ಟಾಕ್ಷರೀ, ಪಂಚಾಕ್ಷರೀ ಈ ಮೂರರ ಜಪವನ್ನು ಮಾಡುತ್ತಿರುವ ವಟುವೇ ಬ್ರಹ್ಮಣ್ಯವನ್ನೂ, ವೇದಾಧಿಕಾರವನ್ನೂ ಪಡೆಯುವನೆಂದು ಸ್ಪಷ್ಟವಾದ ಪ್ರಮಾಣ ವಚನವು ಕಂಡುಬರುತ್ತದೆ. (ಸ್ಮೃ. ಸಾ. ಸ. ನಿ. ಪ್ರ. ಉ ಶ್ಲೋ. ೮೧.) ಸ್ಮಾರ್ತ ಬ್ರಹ್ಮಚಾರಿಯು ಉಪನಯನವಾಗಿ ನಾಲ್ಕು ದಿನಗಳ ವರೆಗೆ ಮಾತ್ರವೇ ಗೋಪೀಚಂದನ ಧಾರಣಮಾಡುಬೇಕು. ಆ ಮೇಲೆ ಭಸ್ಮಧಾರಣೆಮಾಡತಕ್ಕದ್ದು. ಹೀಗೆ ಪ್ರಮಾಣವಚನವಿದೆ. (ಸ್ಮೃ. ಸಾ. ಸ. ನಿ. ಪ್ರ.ಉ ೭೫) ಆಚಮನ, ಪ್ರಾಣಾಯಾಮ, ಅರ್ಘ್ಯಪ್ರದಾನ ಮೊದಲಾದವುಗಳನ್ನು ಮಾಡುವ ಕ್ರಮವನ್ನು ಕನ್ನಡ ಭಾಷೆಯಲ್ಲಿ ಬರೆದರೆ ಪುಟಗಳು ಹೆಚ್ಚಾಗಬಹುದೆಂದೂ ಆ ಕ್ರಮವನ್ನು ಬಲ್ಲವರಿಂದ ತಿಳಿದುಕೊಳ್ಳಲಿಕ್ಕೆ ಬಹಳ ಕಷ್ಟವಾಗಲಿಕ್ಕಿಲ್ಲವೆಂದೂ ಆಲೋಚಿಸಿ ಸಂಸ್ಕೃತ ಶಬ್ದಗಳಿಂದ ಸೂಚನೆಮಾತ್ರ ಕೊಡಲಾಗಿದೆ.

ಈ ಸಂಧ್ಯಾವಂದನೆಯಲ್ಲಿಯೂ, ಅರ್ಘ್ಯಪ್ರದಾನ, ಗಾಯತ್ರೀಜಪ, ಸೂರ್ಯೋಪಸ್ಥಾನಗಳೇ ಪ್ರಧಾನವಾಗಿದ್ದು ಬಾಕಿ ಎಲ್ಲವೂ ಅದಕ್ಕೆ ಅಂಗವಾದವುಗಳು. ಆಶೌಚದಲ್ಲಿ ಅರ್ಘ್ಯಪ್ರದಾನ, ಗಾಯತ್ರೀಜಪಗಳನ್ನು ಮಾತ್ರವೇ ಮಾಡಿದರೆ ಸಾಕೆಂದು ಪ್ರಮಾಣವಿರುವುದರಿಂದ ಸಂಧ್ಯಾಲೋಪವು ಸಂಭವಿಸುವುದಿಲ್ಲ. ಅದು ಕಾರಣ ಈಗ ನಮ್ಮ ಹವ್ಯಕರಲ್ಲಿ ಆಶೌಚಾಂತದಲ್ಲಿ ಮಾಡತಕ್ಕ ಪುಣ್ಯಾಹವಾಚನ ಕಾಲದಲ್ಲಿ ಪುರೋಹಿತರು ಮಾಡಿಸುವ 'ಸಂಧ್ಯಾಲೋಪಪ್ರಾಯಶ್ಚಿತ್ತ'ವೆಂಬ ಹೋಮಕ್ಕೆ ಈ ವರೆಗೆ ಯಾವ ಪ್ರಮಾಣವಚನವೂ ದೊರೆಯಲಿಲ್ಲ.

ಜ್ವರವೇ ಮೊದಲಾದ ರೋಗಪೀಡಿತನಾಗಿದ್ದಾಗ ಬಿಸಿನೀರಿನಿಂದಲಾದರೂ ಸಂಧ್ಯಾವಂದನೆಮಾಡಬೇಕು. ಅಷ್ಟಕ್ಕೂ ಸಾಧ್ಯವಿಲ್ಲದಿದ್ದರೆ

ಮನಸ್ಸಿನಿಂದಲೇ ಮಾಡಬೇಕು. ಅಂತೂ ಸಂಧ್ಯಾಲೋಪವು ಸರ್ವಥಾ ಆಗಕೂಡದು. ಒಂದು ವೇಳೆ ರಾಷ್ಟ್ರಕ್ಷೋಭೆಯುಂಟಾಗಿ, ರಾಜಾಜ್ಞೆಯ ಪ್ರಸಂಗದಲ್ಲಿ, ಕಠಿಣವಾದ ರೋಗದಿಂದ ನರಳುತ್ತಿರುವಾಗ, ಸಂಧ್ಯೋಪಾಸನೆ ಮಾಡಲು ಸಾಧ್ಯವಿಲ್ಲದೆ ಹೋದರೆ ಆ ಬಗ್ಗೆ ಯಾವ ದೋಷವೂ ಇಲ್ಲವೆಂದು ಪ್ರಮಾಣವಿದೆ. ಯಾವುದಾದರೊಂದು ಇಕ್ಕಟ್ಟಿನಿಂದ ಅಥವಾ ಪ್ರಮಾದದಿಂದ ಸಂಧ್ಯಾಲೋಪವು ಸಂಭವಿಸಿದಲ್ಲಿ ಮರುದಿನ ಉಪವಾಸವಿದ್ದು ೧೦೦೦೦ ಹತ್ತು ಸಾವಿರ ಅಥವಾ ಸಾವಿರದ ಎಂಟು (೧೦೦೮) ಗಾಯತ್ರೀ ಜಪವನ್ನು ಮಾಡಬೇಕು. ಇದೇ ಪ್ರಾಯಶ್ಚಿತ್ತವಾಗಿದೆ. ಈ ಪ್ರಕಾರ ಸಂಧ್ಯಾವಂದನೆಯ ಮಹತ್ವವನ್ನು ಅವಶ್ಯಕತೆಯನ್ನೂ ತಿಳಿದುಕೊಂಡರೆ ಬ್ರಾಹ್ಮಣನಾದವನು ಸರ್ವಥಾ ಸಂಧ್ಯಾವಂದನೆಯನ್ನು ಮಾಡದೆ ಇರಲಾರನು.

ಪರಕ್ಕಜೆ ಶಂಭು ಭಟ್ಟ.

ಬೋಧಾಯನೀಯ
ಸಂಧ್ಯೋಪಾಸನ ಪದ್ಧತಿ

ಪ್ರಾತಃ ಸಂಧ್ಯಾ

ಸಿತಂ ಭಸ್ಮಗೃಹೀತ್ವಾ ಅದ್ಭಿಃ ಸವಿಮೃಶ್ಯ, ಓಂ ತ್ರ್ಯಂಬಕಂ ಯಜಾಮಹೇಸುಗಂಧಿಂ ಪುಷ್ಟಿವರ್ಧನಂ । ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯ ಮಾಮೃತಾತ್ । ಇತಿ ಮಂತ್ರೇಣ ಮಧ್ಯಮಾನಾಮಿಕಾಂಗುಷ್ಠೈಃ ಲಲಾಟೇ ವಕ್ಷಸಿ ಬಾಹ್ವೋಃ ಗ್ರೀವಾಯಾಂ ಪಿಠರೇ ಶಿರಸಿಚಕ್ರಮೇಣ ತ್ರಿಪುಂಡ್ರಂಧಾರಯೇತ್ ॥

ಅಪವಿತ್ರಃ ಪವಿತ್ರೋವಾ ಸರ್ವಾವಸ್ಥಾಂಗತೋಪಿವಾ । ಯಃ ಸ್ಮರೇತ್ ಪುಂಡರೀಕಾಕ್ಷಂ ಸಬಾಹ್ಯಾಂಭ್ಯಂತರಃ ಶುಚಿಃ । ವಿಷ್ಣೋ । ವಿಷ್ಣೋ । ವಿಷ್ಣೋ ।

ಓಂ ಋಗ್ವೇದಾಯಸ್ವಾಹಾ । ಯಜುರ್ವೇದಾಯಸ್ವಾಹಾ । ಸಾಮವೇದಾಯಸ್ವಾಹಾ । ಇತಿ ಗೋಕರ್ಣಾಕೃತಿ ಹಸ್ತೇನ ತ್ರಿವಾರಂ ಮಾಷಮಗ್ನಂ ಜಲಂ ಪಿಬೇತ್ ॥ ಏವಂ ದ್ವಿರಾಚಮ್ಯ । ದಕ್ಷಿಣಕರ್ಣಂ ಸ್ಪೃಶೇತ್ ॥

॥ ಪ್ರಾಣಾಯಾಮಃ ॥

ಪ್ರಣವಸ್ಯ, ಪರಬ್ರಹ್ಮಋಷಿಃ । ದೈವೀಗಾಯತ್ರೀಚ್ಛಂದಃ । ಪರಮಾತ್ಮಾದೇವತಾ । ಪ್ರಾಣಾಯಾಮೇ ವಿನಿಯೋಗಃ ॥

ಓಂ ಭೂರ್ಭುವಸ್ಸುವಃ । ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ । ಧಿಯೋಯೋನಃ ಪ್ರಚೋದಯಾತ್ ॥ ಓಮಾಪೋಜ್ಯೋತೀರಸೋಽಮೃತಂ ಬ್ರಹ್ಮಭೂರ್ಭುವಸ್ಸುವರೋಂ ॥ ಏವಂ ತ್ರಿವಾರಂಜಪೇತ್ ॥

॥ ಸಂಕಲ್ಪಃ ॥

ಮಮೋಪಾತ್ತ ದುರಿತಕ್ಷಯದ್ವಾರಾಶ್ರೀಪರಮೇಶ್ವರ ಪ್ರೀತ್ಯರ್ಥಂ ಪ್ರಾತಃ ಸಂಧ್ಯಾಮುಪಾಸಿಷ್ಯೇ ॥

॥ ಮಾರ್ಜನಂ ॥

ಓಂ ಆಪೋ ಹಿ ಷ್ಠಾಮಯೋಭುವಃ । ತಾನ ಊರ್ಜೇದಧಾತನ। ಮಹೇರಣಾಯ ಚಕ್ಷಸೇ ॥ ಯೋವಃ ಶಿವತಮೋರಸಃ । ತಸ್ಯಭಾಜಯತೇಹನಃ । ಉಶತೀರಿವ ಮಾತರಃ । ತಸ್ಮಾಅರಂಗಮಾಮವಃ । ಯಸ್ಯಕ್ಷಯಾಯ ಜಿನ್ವಥ । ಆಪೋಜನಯಥಾಚನಃ ॥ ಇತಿ ನವಭಿಃಸ್ವಶಿರಸಿಮಾರ್ಜಯೇತ್ ॥

॥ ಮಂತ್ರಾಚಮನಂ ॥ ಹಸ್ತೇ ಜಲಂಗೃಹೀತ್ವಾ ॥

ಓಂ ಸೂರ್ಯಶ್ಚ ಮಾ ಮನ್ಯುಶ್ಚ ಮನ್ಯುಪತಯಶ್ಚ ಮನ್ಯು ಕೃತೇಭ್ಯಃ । ಪಾಪೇಭ್ಯೋ ರಕ್ಷಂತಾಂ । ಯದ್ರಾತ್ರಿಯಾ ಪಾಪಮಕಾರ್ಷಂ । ಮನಸಾವಾಚಾ ಹಸ್ತಾಭ್ಯಾಂ ॥ ಪದ್ಭ್ಯಾ ಮುದರೇಣ ಶಿಶ್ನಾ । ರಾತ್ರಿಸ್ತದವಲುಂಪತು । ಯತ್ಕಿಂಚ ದುರಿತಂ ಮಯಿ । ಇದಮಹಂ ಮಾಮಮೃತಯೋನೌ ॥ ಸೂರ್ಯೇ ಜ್ಯೋತಿಷಿಜುಹೋಮಿಸ್ವಾಹಾ ॥ ಇತಿ ಜಲಂ ಪೀತ್ವಾ ॥ ದ್ವಿರಾಚಮ್ಯ ॥

ಪುನರ್ಮಾರ್ಜನಂ

ಓಂ ದಧಿಕ್ರಾವ್ಣ್ಣೋ ಅಕಾರಿಷಂ ಜಿಷ್ಣೋರಶ್ವಸ್ಯವಾಜಿನಃ। ಸುರಭಿನೋಮುಖಾಕರತ್ಪ್ರಣ ಆಯೂಗ್ಂಷಿತಾರಿಷತ್ ॥ ಆಪೋಹಿಷ್ಠಾ ಮಯೋಭುವಃ । ...... ಚನಃ ॥

॥ ಅರ್ಘ್ಯಪ್ರದಾನಂ ॥

ಓಂ ಭೂರ್ಭುವಸ್ಸುವಃ । ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯಧೀಮಹಿ । ಧಿಯೋಯೋನಃ ಪ್ರಚೋದಯಾತ್ ॥ ಶ್ರೀ ಭಾಸ್ಕರಾಯನಮಃ ಇದಮರ್ಘ್ಯಂ. ಏವಂ ತ್ರಿವಾರಂ ಅರ್ಘ್ಯಂದದ್ಯಾತ್.

॥ ಪ್ರಾಯಶ್ಚಿತ್ತಾರ್ಘ್ಯಂ ॥

ಕಾಲಾತಿಕ್ರಮದೋಷ ಪರಿಹಾರಾರ್ಥಂ ಪ್ರಾಯಶ್ಚಿತ್ತಾರ್ಘ್ಯಂ ಕರಿಷ್ಯೇ ॥

ಓಂ ಭೂಃ । ಓಂ ಭುವಃ । ಓಗ್ಂ ಸುವಃ ಓಂ ಮಹಃ ಓಂ ಜನಃ ಓಂ ತಪಃ । ಓಗ್ಂ ಸತ್ಯಂ ॥ ಓಂ ಭೂರ್ಭುವಸ್ಸುವಃ । ತತ್ಸವಿತುರ್ವರೇಣ್ಯಂ..ಯಾತ್ । ಓಂ ಭೂಃ । ಓಂ ಭುವಃ । ಓಗ್ಂ ಸುವಃ । ಓಂ ಮಹಃ ಓಂ ಜನಃ । ಓಂ ತಪಃ । ಓಗ್ಂ ಸತ್ಯಂ । ಇತ್ಯರ್ಘ್ಯಂ ದತ್ವಾ । ದ್ವಿರಾಚಮ್ಯ ॥ ಅಸಾವಾದಿತ್ಯೋ ಬ್ರಹ್ಮ ॥ ದ್ವಿರಾಚಮ್ಯ ॥

ಗಾಯತ್ರ್ಯಾವಾಹನಂ

ಓಮಿತ್ಯೇಕಾಕ್ಷರಂ ಬ್ರಹ್ಮ ॥ ಅಗ್ನಿರ್ದೇವತಾ ಬ್ರಹ್ಮ ಇತ್ಯಾರ್ಷಂ ॥ ಗಾಯತ್ರಂ ಛಂದಂ ಪರಮಾತ್ಮಂ ಸರೂಪಂ ॥ ಸಾಯುಜ್ಯಂ ವಿನಿಯೋಗಂ ॥ ಆಯಾತು ವರದಾ ದೇವೀ ಅಕ್ಷರಂ ಬ್ರಹ್ಮಸಂಮಿತಂ ॥ ಗಾಯತ್ರೀಂ ಛಂದಸಾಂ ಮಾತೇದಂ ಬ್ರಹ್ಮ ಜುಷಸ್ವ ಮೇ ॥ ಯದಹ್ನಾತ್ಕುರುತೇ ಪಾಪಂ ತದಹ್ನಾತ್ಪ್ರತಿ ಮುಚ್ಯತೇ ॥ ಯದ್ರಾತ್ರಿಯಾತ್ಕುರುತೇ ಪಾಪಂ ತದ್ರಾತ್ರಿಯಾತ್ಪ್ರತಿ ಮುಚ್ಯತೇ ॥ ಸರ್ವವರ್ಣೇ ಮಹಾದೇವಿ ಸಂಧ್ಯಾವಿದ್ಯೇ ಸರಸ್ವತಿ ॥ ಓಜೋಸಿ ಸಹೋಸಿ ಬಲಮಸಿ ಭ್ರಾಜೋಸಿ ದೇವಾನಾಂ ಧಾಮನಾಮಾಸಿ

ವಿಶ್ವಮಸಿ ವಿಶ್ವಾಯುಃ ಸರ್ವಮಸಿ ಸರ್ವಾಯುರಭಿಭೂರೋಂ ಗಾಯತ್ರೀಮಾವಾಹಯಾಮಿ ಸಾವಿತ್ರೀಮಾವಾಹಯಾಮಿ ಸರಸ್ವತೀಮಾವಾಹಯಾಮಿ ಛಂದರ್ಷೀನಾವಾಹಯಾಮಿ ಶ್ರಿಯಮಾವಾಹಯಾಮಿ ಗಾಯತ್ರಿಯಾ ಗಾಯತ್ರೀ ಚ್ಛಂದೋ ವಿಶ್ವಾಮಿತ್ರಋಷಿಃ ಸವಿತಾದೇವತಾಽಗ್ನಿರ್ಮುಖಂ ಬ್ರಹ್ಮಾಶಿರೋ ವಿಷ್ಣುರ್ಹೃದಯಗ್ಂ ರುದ್ರಃ ಶಿಖಾ ಪೃಥಿವೀ ಯೋನಿಃ ಪ್ರಾಣಾಪಾನ ವ್ಯಾನೋದಾನ ಸಮಾನಾ ಸಪ್ರಾಣಾ ಶ್ವೇತವರ್ಣಾ ಸಾಂಖ್ಯಾಯನಸಗೋತ್ರಾ ಗಾಯತ್ರೀ ಚತುರ್ವಿಗ್ಂಶತ್ಯಕ್ಷರಾ ತ್ರಿಪದಾ ಷಟ್ಕುಕ್ಷಿಃ ಪಂಚ ಶೀರ್ಷೋಪನಯನೇ ವಿನಿಯೋಗ ಓಂ ಭೂಃ ಓಂ ಭುವಃ ಓಗ್ಂ ಸುವಃ ಓಂ ಮಹಃ ಓಂ ಜನಃ ಓಂ ತಪಃ ಓಗ್ಂ ಸತ್ಯಂ ॥

ಅಷ್ಟೋತ್ತರ ಶತಂ (೧೦೮) ಅಷ್ಟಾವಿಂಶತಿಂ (೨೮) ದಶ (೧೦) ವಾ ಗಾಯತ್ರೀಂ ಜಪೇತ್ ॥ ಅಥ ಉತ್ಥಾಯ ಸ್ವಸ್ತಿಕಾಕೃತಿ ಹಸ್ತಃ ಪ್ರಾಙ್ಮುಖಃ ಸ್ಥಿತ್ವಾ ಸೂರ್ಯಮುಪತಿಷ್ಠತೇ ॥

ಮಿತ್ರಸ್ಯ ಚರ್ಷಣೀ ಧೃತಶ್ರವೋ ದೇವಸ್ಯ ಸಾನಸಿಂ ॥ ಸತ್ಯಂ ಚಿತ್ರಶ್ರವಸ್ತಮಂ ॥ ಮಿತ್ರೋ ಜನಾನ್ ಯಾತಯತಿ ಪ್ರಜಾನನ್ಮಿತ್ರೋ ದಾಧಾರ ಪೃಥಿವೀ ಮುತದ್ಯಾಂ ॥ ಮಿತ್ರಃ ಕೃಷ್ಟೀರ ನಿಮಿಷಾಭಿಚಷ್ಟೇ ಸತ್ಯಾಯ ಹವ್ಯಂ ಘೃತವದ್ವಿಧೇಮ ॥

॥ ದಿಗುಪಸ್ಥಾನಂ ॥

ನಮಃ ಪ್ರಾಚ್ಯೈದಿಶೇಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ ನಮೋ ದಕ್ಷಿಣಾಯೈದಿಶೇಯಾಶ್ಚದೇವತಾ ಏತಸ್ಯಾಂ ಪ್ರತಿವಸಂತ್ಯೆ ತಾಭ್ಯಶ್ಚ ನಮೋ ನಮಃ ಪ್ರತೀಚ್ಯೈದಿಶೇಯಾಶ್ಚದೇವತಾ ಏತಸ್ಯಾಂ

ಪ್ರತಿವಸಂತ್ಯೇತಾಭ್ಯಶ್ಚ ನಮೋನಮಃ ಉದೀಚ್ಯೈದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ ನಮಃ ಊರ್ಧ್ವಾಯೈ ದಿಶೇಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ ನಮೋಽಧರಾಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ ನಮೋಽವಾಂತರಾಯೈದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ ನಮೋ ಗಂಗಾಯಮುನಯೋರ್ಮಧ್ಯೇಯೇ ವಸಂತಿ ತೇ ಮೇ ಪ್ರಸನ್ನಾತ್ಮಾನ ಶ್ಚಿರಂಜೀವಿತಂ ವರ್ಧಯಂತಿ ನಮೋ ಗಂಗಾಯಮುನಯೋ ರ್ಮುನಿಭ್ಯಶ್ಚ ನಮೋ ನಮೋ ಗಂಗಾಯಮುನಯೋರ್ಮುನಿಭ್ಯಶ್ಚ ನಮಃ ॥ ನಮೋ ಬ್ರಹ್ಮಣೇ ನಮೋ ಅಸ್ತ್ವಗ್ನಯೇ ನಮಃ ಪೃಥಿವ್ಯೈ ನಮ ಓಷಧೀಭ್ಯಃ ॥ ನಮೋವಾಚೇ ನಮೋ ವಾಚಸ್ಪತಯೇ ನಮೋ ವಿಷ್ಣವೇ ಬೃಹತೇ ಕರೋಮಿ ॥ ಭದ್ರಂ ನೋ ಅಪಿವಾತಯ ಮನಃ ॥

ಓಂ ಶಾಂತಿಃ ಶಾಂತಿಃ ಶಾಂತಿಃ ಸಂಧ್ಯಾಯೈನಮಃ ॥ ಗಾಯತ್ರ್ಯೈ ನಮಃ ॥ ಸಾವಿತ್ರ್ಯೈ ನಮಃ ॥ ಸರಸ್ವತ್ಯೈ ನಮಃ ॥ ಸರ್ವೇಭ್ಯೋದೇವೇಭ್ಯೋ ನಮಃ॥ ಸರ್ವಾಭ್ಯೋ ದೇವತಾಭ್ಯೋನಮಃ ॥ ಋಷಿಭ್ಯೋನಮಃ ॥ ಮುನಿಭ್ಯೋ ನಮಃ ॥ ಗುರುಭ್ಯೋನಮಃ ॥ ಆಚಾರ್ಯೇಭ್ಯೋ ನಮಃ ॥ ಈಶಾನಾಯ ನಮಃ ॥ ಗೋಪಿತೃಮಾತೃ ಗುರುದೇವತಾಭ್ಯೋ ನಮಃ ॥

॥ ಅಭಿವಾದನಂ ॥

ಶ್ರೀ ಮದ್ಯಜುಃ ಶಾಖಾ ಬೋಧಾಯನ ಸೂತ್ರಾನ್ವಿತ............... .... ಗೋತ್ರಃ......ಶರ್ಮಾಹಮಸ್ಮಿ ಭೋ ಅಭಿವಾದಯೇ ॥ ಇತ್ಯಭಿವಾದ್ಯ. ॥ ಉಪವಿಶ್ಯ ॥

ಉತ್ತಮೇ ಶಿಖರೇ ಜಾತೇ ಭೂಮ್ಯಾಂ ಪರ್ವತ ಮೂರ್ಧನಿ ॥ ಬ್ರಾಹ್ಮಣೇಭ್ಯೋಽಭ್ಯನುಜ್ಞಾತಾ ಗಚ್ಛದೇವಿ ಯಥಾಸುಖಂ ॥ ಸ್ತುತೋ ಮಯಾ ವರದಾ ವೇದಮಾತಾ ಪ್ರಚೋದಯಂತೀ ಪವನೇ ದ್ವಿಜಾತಾ ॥ ಆಯುಃ ಪೃಥಿವ್ಯಾಂ ದ್ರವಿಣಂ ಬ್ರಹ್ಮವರ್ಚಸಂ ಮಹ್ಯಂ ದತ್ವಾ ಪ್ರಜಾತುಂ ಬ್ರಹ್ಮಲೋಕಂ ॥

ಅಷ್ಟಾಕ್ಷರೀ ಜಪಃ

ಸಾಧ್ಯಾ ನಾರಾಯಣ ಋಷಿಃ ॥ ದೈವೀ ಗಾಯತ್ರೀ ಛಂದಃ ॥ ಪರಮಾತ್ಮಾದೇವತಾ ॥ ಓಂ ನಮೋ ನಾರಾಯಣಾಯ ॥ ಇತಿ ಗಾಯತ್ರೀ ದ್ವಿಗುಣಂ ಜಪೇತ್ ॥

ಪಂಚಾಕ್ಷರೀ ಜಪಃ

ವಾಮದೇವ ಋಷಿಃ ಪಂಕ್ತಿಚ್ಛಂದಃ ಸದಾಶಿವ ರುದ್ರೋ ದೇವತಾ ॥ ಓಂ ನಮಃ ಶಿವಾಯ ॥ ಇತಿ ಗಾಯತ್ರೀ ಚತುರ್ಗುಣಂ ಜಪೇತ್ ॥ ದ್ವಿರಾಚಮ್ಯ ॥ ಅನೇನ ಪ್ರಾತಃ ಸಂಧ್ಯಾವಂದನ ಕರ್ಮಣಾ ಶ್ರೀ ಪರಮೇಶ್ವರಃ ಪ್ರೀಯತಾಂ ॥ ಇತೀಶ್ವರಾರ್ಪಣಂ ॥

ಅಥ ಸಾಯಂಸಂಧ್ಯಾ

ಅಪವಿತ್ರಃ ಪವಿತ್ರೋವಾ. ಇತಿ ವಿಷ್ಣುಸ್ಮರಣಂ ॥ ಆಚಮ್ಯ ಪ್ರಾಣಾನಾಯಮ್ಯ ॥

ಮಮೋಪಾತ್ತ ದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಸಾಯಂ ಸಂಧ್ಯಾಮುಪಾಸಿಷ್ಯೇ ॥ ಆ ಪೋಹಿಷ್ಠಾ......ಇತಿ ಮಾರ್ಜನಂ ॥ ಓಂ ಅಗ್ನಿಶ್ಚ ಮಾಮನ್ಯುಶ್ಚ ಮನ್ಯುಪತಯಶ್ಚ ಮನ್ಯು ಕೃತೇಭ್ಯಃ ॥ ಪಾಪೇಭ್ಯೋರಕ್ಷಂತಾಂ ॥ ಯದಹ್ನಾ ಪಾಪಮಕಾರ್ಷಂ ॥ ಮನಸಾವಾಚಾ ಹಸ್ತಾ

ಭ್ಯಾಂ ॥ ಪದ್ಭ್ಯಾಮುದರೇಣ ಶಿಶ್ನಾ ॥ ಅಹಸ್ತದವಲುಂಪತು ॥ ಯತ್ಕಿಂಚ ದುರಿತಂ ಮಯಿ ॥ ಇದಮಹಂ ಮಾಮಮೃತಯೋನೌ ॥ ಸತ್ಯೇ ಜ್ಯೋತಿಷಿ ಜು ಹೋಮಿಸ್ವಾಹಾ ॥ ಆಚಮ್ಯ.

ದಧಿಕ್ರಾವ್ಣ್ಣೋ ಅಕಾರಿಷಂ ಇತಿ ಪ್ರಾತಃ ಕಾಲವತ್ ಮಾರ್ಜಯಿತ್ವಾ ॥ ಅರ್ಘ್ಯತ್ರಯಂ ದತ್ವಾ ॥ ಕಾಲಾತಿಕ್ರಮಪ್ರಾಯಶ್ಚಿತ್ತಾರ್ಘ್ಯಂಚ ದತ್ವಾ॥ ಆಚಮ್ಯ ॥ ಗಾಯತ್ರ್ಯಾವಾಹನಾದಿ ಗಾಯತ್ರೀ ಜಪಾಂತಂ ಪೂರ್ವವತ್ ಕೃತ್ವಾ ॥

ಅಥ ಉತ್ಥಾಯ ಪ್ರತ್ಯಙ್ಮುಖಃ ಕರೌಮುಕುಲಿತೌಕೃತ್ವಾ ವರುಣಮುಪತಿಷ್ಠತೇ ॥

ಇಮಂ ಮೇ ವರುಣ ಶ್ರುಧೀಹವ ಮದ್ಯಾ ಚ ಮೃಡಯ ॥ ತ್ವಾಮವಸ್ಯುರಾಚಕೇ ॥ ತತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ ॥ ಅಹೇಡಮಾನೋ ವರುಣೇಹ ಬೋಧ್ಯುರುಶಗ್ಂ ಸಮಾನ ಆಯುಃ ಪ್ರಮೋಷೀಃ ॥

ದಿಗುಪಸ್ಥಾನಂ

ನಮಃ ಪ್ರತೀಚ್ಯೈ ದಿಶೇ ಯಾಶ್ಚ ದೇವತಾ....
ನಮ ಉದೀಚ್ಯೈ ದಿಶೇ....
ನಮಃ ಪ್ರಾಚ್ಯೈ ದಿಶೇ....
ನಮೋ ದಕ್ಷಿಣಾಯೈ ದಿಶೇ....
ನಮ ಊರ್ಧ್ವಾಯೈ ದಿಶೇ....
ನಮೋಽಧರಾಯೈ ದಿಶೇ

ನಮೋಽವಾಂತರಾಯೈ ದಿಶೇ. ಇತ್ಯಾದಿ ಸರ್ವಂಪ್ರಾತಃಕಾಲವತ್‌ಕೃತ್ವಾ

ಅನೇನ ಸಾಯಂ ಸಂಧ್ಯಾವಂದನ ಕರ್ಮಣಾ ಶ್ರೀಪರಮೇಶ್ವರಃ ಪ್ರೀಯತಾಂ ॥ ಇತೀಶ್ವರಾರ್ಪಣಂ ॥

ಅಥ ಮಧ್ಯಾಹ್ನ ಸಂಧ್ಯಾ

ವಿಷ್ಣುಸ್ಮರಣಂ ॥ ಆಚಮ್ಯ ॥ ಪ್ರಾಣಾನಾಯಮ್ಯ ॥ ಮಮೋಪಾತ್ತ ದುರಿತಕ್ಷಯ ದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ ಮಧ್ಯಾಹ್ನ ಸಂಧ್ಯಾಮು ಪಾಸಿಷ್ಯೇ ॥ ಆಪೋಹಿಷ್ಠಾ........ ಇತಿ ಮಾರ್ಜನಂ ॥

॥ ಮಂತ್ರಾಚಮನಂ ॥ ಹಸ್ತೇ ಜಲಮಾದಾಯ ಓಂ ಆಪಃ ಪುನಂತು ಪೃಥಿವೀಂ ಪೃಥಿವೀ ಪೂತಾ ಪುನಾತು ಮಾಂ । ಪುನಂತು ಬ್ರಹ್ಮಣ ಸ್ಪತಿರ್ಬ್ರಹ್ಮ ಪೂತಾ ಪುನಾತುಮಾಂ । ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ । ಸರ್ವಂ ಪುನಂತು ಮಾಮಾಪೋ ಸತಾಂ ಚ ಪ್ರತಿಗ್ರಹ ಗ್ಂಸ್ವಾಹಾ ॥ ಇತಿ ಜಲಂ ಪೀತ್ವಾ ದ್ವಿರಾಚಮ್ಯ ॥

ಅರ್ಘ್ಯಪ್ರದಾನಂ

ಓಂ ಹಗ್ಂಸಃ ಶುಚಿಷದ್ವಸುರಂತರಿಕ್ಷ ಸದ್ಧೋತಾವೇದಿಷ ದತಿಥಿ ದುರ್ರೋಣಸತ್ ॥ ನೃಷದ್ವರಸದೃತ ಸದ್ವ್ಯೋಮಸದಬ್ಜಾ ಗೋಜಾ ಋತ ಜಾ ಅದ್ರಿಜಾ ಋತಂ ಬೃಹತ್ ॥ ಶ್ರೀ ಭಾಸ್ಕರಾಯ ನಮಃ ಇದಮರ್ಘ್ಯಂ॥ ಇತ್ಯರ್ಘ್ಯಂದತ್ವಾ ॥ ಪ್ರಾತಃಕಾಲವತ್ ಕಾಲಾತಿಕ್ರಮ ಪ್ರಾಯಶ್ಚಿತ್ತಾರ್ಘ್ಯಂ ಚ ದತ್ವಾ ॥ ಓಂ ಅಸಾವಾದಿತ್ಯೋ ಬ್ರಹ್ಮ ॥ ದ್ವಿರಾಚಮ್ಯ ॥ ಪ್ರಾತಃಕಾಲ ವತ್ ಗಾಯತ್ರೀ ಜಪಾಂತಂ ಕೃತ್ವಾ ॥ ಊರ್ಧ್ವಬಾಹುರಾಯತಾಕ್ಷಃ ಸೂರ್ಯಮುಪತಿಷ್ಠತೇ ॥

ಓಂ ಉದ್ವಯಂ ತಮಸಸ್ಪರಿ ಪಶ್ಯಂತೋ ಜ್ಯೋತಿರುತ್ತರಂ ॥ ದೇವಂ ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಂ ॥ ಉದುತ್ಯಂ ಜಾತವೇದ ಸಂ ದೇವಂ ವಹಂತಿ ಕೇತವಃ । ದೃಶೇ ವಿಶ್ವಾಯ ಸೂರ್ಯಂ ॥ ಚಿತ್ರಂ

ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ಆ ಪ್ರಾದ್ಯಾವಾ ಪೃಥಿವೀ ಅಂತರಿಕ್ಷಗ್‌ಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ॥ ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್ । ಪಶ್ಯೇಮ ಶರದಶ್ಶತಂ ಜೀವೇಮ ಶರದಃ ಶತಂ ನಂದಾಮ ಶರದಃ ಶತಂ ಮೋದಾಮ ಶರದಃ ಶತಂ ಭವಾಮ ಶರದಃ ಶತಗ್‌ಂ ಶೃಣವಾಮ ಶರದಃ ಶತಂ ಪ್ರಬ್ರವಾಮ ಶರದಃ ಶತಮಜೀತಾಃ ಸ್ಯಾಮ ಶರದಃ ಶತಂ ಜ್ಯೋಕ್ಚ ಸೂರ್ಯಂ ದೃಶೇ ॥ ಯ ಉದಗಾನ್ಮಹತೋಽರ್ಣವಾದ್ವಿಭ್ರಾಜಮಾನಃ ಸರಿರಸ್ಯ ಮಧ್ಯಾತ್ಸ ಮಾವೃಷಭೋ ಲೋಹಿತಾಕ್ಷಃ ಸೂರ್ಯೋ ವಿಪಶ್ಚಿನ್ಮನಸಾ ಪುನಾತು ॥ ಓಂ ನಮಃ ಪ್ರಾಚ್ಯೈ ದಿಶೇ... ಇತ್ಯಾದಿ ದಿಗುಪಸ್ಥಾನಾದಿ ಸರ್ವಂ ಪ್ರಾತಃಕಾಲವತ್ ಕೃತ್ವಾ, ಅನೇನ ಮಧ್ಯಾಹ್ನ ಸಂಧ್ಯಾವಂದನ ಕರ್ಮಣಾ ಶ್ರೀ ಪರಮೇಶ್ವರಃ ಪ್ರೀಯತಾಂ ॥ ಇತೀಶ್ವರಾರ್ಪಣಂ ಕುರ್ಯಾತ್ ॥

ಭೋಜನವಿಧಿಃ

ಸವ್ಯಾಹೃತಿಗಾಯತ್ರ್ಯಾ ಅನ್ನಂ ಪ್ರೋಕ್ಷ್ಯ ॥ ಸತ್ಯಂ ತ್ವರ್ತೇನ ಪರಿಷಿಂಚಾಮಿ । ಇತಿ ಪರಿಷಿಚ್ಯ ॥ (ರಾತ್ರೌತು—ಋತಂ ತ್ವಾ ಸತ್ಯೇನ ಪರಿಷಿಂಚಾಮಿ ॥ ಇತಿ ಪರಿಷಿಂಚೇತ್) ಹಸ್ತೇಜಲಮಾದಾಯ ॥ ಅಂತಶ್ಚರತಿ ಭೂತೇಷು ಗುಹಾಯಾಂ ವಿಶ್ವಮೂರ್ತಿಷು ॥ ತ್ವಂ ಯಜ್ಞಸ್ತ್ವಂವಷಟ್ಕಾರಸ್ತ್ವಂವಿಷ್ಣುಸ್ತ್ವಂ ಪುರುಷಃಪರಃ ॥ ಅಮೃತೋಪಸ್ತರಣಮಸಿ ಸ್ವಾಹಾ ॥ ಇತಿ ಜಲಂ ಪೀತ್ವಾ ॥ ವಾಮಹಸ್ತೇನ ಭೋಜನಪಾತ್ರಂ ಸ್ಪೃಶನ್ ॥

ಓಂ ಪ್ರಾಣಾಯ ಸ್ವಾಹಾ ॥ ಇತಿ ತರ್ಜನೀ ಮಧ್ಯಮಾಂಗುಷ್ಠೈಃ ಪ್ರಾಕ್
ಸ್ಥಿತಮನ್ನಂ ಅಶ್ನೀಯಾತ್ ॥

ಓಂ ಅಪಾನಾಯ ಸ್ವಾಹಾ ಇತಿ ಮಧ್ಯಮಾನಾಮಿಕಾಗುಂಷ್ಠೈಃ ದಕ್ಷಿಣ
ತೋನ್ನಮಶ್ನೀಯಾತ್ ॥

ಓಂ ವ್ಯಾನಾಯ ಸ್ವಾಹಾ ॥ ಇತಿ ಕನಿಷ್ಠಾನಾಮಿಕಾಂಗುಷ್ಠೈಃ ಪಶ್ಚಿಮತಃ

ಓಂ ಉದಾನಾಯ ಸ್ವಾಹಾ ಇತಿ ಕನಿಷ್ಠಾತರ್ಜನ್ಯಂಗುಷ್ಠೈಃ ಉತ್ತರತಃ

ಓಂ ಸಮಾನಾಯ ಸ್ವಾಹಾ ಇತಿ ಸರ್ವಾಭಿರಂಗುಲಿಭಿಃ ಮಧ್ಯತಃ ಅನ್ನ
ಮಶ್ನೀಯಾತ್ ॥

ಓಂ ಬ್ರಹ್ಮಣೇ ಸ್ವಾಹಾ ॥ ಇತ್ಯಪಿ ಮಧ್ಯತಏವ ॥

ಭೋಜನಾಂತೇ ॥ ಅಮೃತಾಪಿಧಾನಮಸಿ ಸ್ವಾಹಾ ॥

ಇತಿ ಪೂರ್ವವತ್ ಜಲಂಪಿಬೇತ್

ಉಪವೀತಧಾರಣ ವಿಧಿಃ

ಆಚಮ್ಯ ॥ ಪ್ರಾಣಾನಾಯಮ್ಯ ॥ ಗಂಗೇಚ ಯಮುನೇ ಚೈವ ಗೋದಾವರಿ ಸರಸ್ವತಿ ॥ ನರ್ಮದೇ ಸಿಂಧೋ ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು ॥ ಗಂಗಾದ್ಯಾಃ ಸರ್ವೇ ತೀರ್ಥಾಃ ಸನ್ನಿಹಿತಾಃ ಸಂತು ॥ ಇತಿ ಕಲಶಂ ಸಂಪೂಜ್ಯ ॥ ಮಮ ಶ್ರೌತಸ್ಮಾರ್ತ ಕರ್ಮಾನುಷ್ಠಾನ ಯೋಗ್ಯತಾ ಸಿದ್ಧ್ಯರ್ಥಂ ಬ್ರಹ್ಮತೇಜೋಭಿವೃದ್ಧ್ಯರ್ಥಂ ಯಜ್ಞೋಪವೀತ ಧಾರಣ ಮಹಂ ಕರಿಷ್ಯೇ ॥ ಇತಿ ಸಂಕಲ್ಪ್ಯ ॥

ಯಜ್ಞೋಪವೀತಂ "ಆಪೋಹಿಷ್ಠಾ ... ಚನಃ" ॥ ಇತಿ ತಿಸೃಭಿಃ ಪ್ರೋಕ್ಷ್ಯ॥ ಓಂಕಾರೋಽಗ್ನಿಶ್ಚ ನಾಗಶ್ಚ ಸೋಮಃ ಪಿತೃಪ್ರಜಾಪತೀ॥ ವಾಯುಃ ಸೂರ್ಯೋ ವಿಶ್ವೇದೇವಾ ಇತ್ಯೇತಾಃ ತಂತುದೇವತಾಃ ॥ ಇತಿ ಧ್ಯಾತ್ವಾ ಓಂ

ಭೂರ್ಭುವಃ ಸುವಃ । ತಂತದೇವತಾ ಆವಾಹಯಾಮಿ । ಇತ್ಯಾವಾಹ್ಯ ॥ ಧ್ಯಾನಂ ಸಮರ್ಪಯಾಮಿ । ಪಾದ್ಯಂ ಸಮರ್ಪಯಾಮಿ । ಅರ್ಘ್ಯಂ ॥ ಆಚಮನೀಯಂ ॥ ಸ್ನಾನಂ ॥ ವಸ್ತ್ರಂ ॥ ಉಪವೀತಂ ॥ ಆಭರಣಂ ॥ ಗಂಧಂ ॥ ಅಕ್ಷತಾನ್ ॥ ಪುಷ್ಪಾಣಿ ॥ ಧೂಪಂ । ದೀಪಂ ॥ ನೈವೇದ್ಯಂ ॥ ತಾಂಬೂಲಂ ॥ ನೀರಾಜನಂ ॥ ಮಂತ್ರಪುಷ್ಪಂ ॥ ಪ್ರದಕ್ಷಿಣಂ ॥ ನಮಸ್ಕಾರಂ ಸಮರ್ಪಯಾಮಿ ॥ ಸರ್ವೋಪಚಾರ ಪೂಜಾಃ ಸಮರ್ಪಯಾಮಿ ॥ ಇತಿ ಸಂಪೂಜ್ಯ ಗಾಯತ್ರ್ಯಾ ದಶವಾರ ಮಭಿಮಂತ್ರ್ಯ

"ದೇವಸ್ಯತ್ವಾ ಸವಿತುಃ ಪ್ರಸವೇಽಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾ ಮಾದದೇ" ಇತ್ಯಾದಾಯ ॥ ಉದ್ವಯಂ ತಮಸಸ್ಪರಿ ...... ॥ ಇತ್ಯಾದಿತ್ಯಂದರ್ಶಯಿತ್ವಾ॥ "ಯಜ್ಞೋಪವೀತಂಪರಮಂ ಪವಿತ್ರಂ ಪ್ರಜಾಪತೇರ್ಯತ್ಸಹಜಂ ಪುರಸ್ತಾತ್ ॥ ಆಯುಷ್ಯಮಗ್ರ್ಯಂ ಪ್ರತಿಮುಂಚಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ॥ ಇತಿಧಾರಯೇತ್ ॥

ಉಪವೀತಂ ಬ್ರಹ್ಮತಂತುಂ ಛಿದ್ರಂ ಕಲ್ಮಷ ಸಂಯುತಂ ॥ ವಿಸೃಜಾಮಿ ನ ಚ ಬ್ರಹ್ಮವರ್ಚೋ ದೀರ್ಘಾಯುರಸ್ತುಮೇ ॥ ಇತಿ ಪೂರ್ವಧೃತ ಯಜ್ಞೋಪವೀತಂ ಅವಮುಂಚ್ಯ ಅಪ್ಸು ಪ್ರಕ್ಷಿಪೇತ್ ॥ ಅನೇನ ಯಜ್ಞೋಪವೀತಧಾರಣಕರ್ಮಣಾ ಶ್ರೀ ಪರಮೇಶ್ವರಃ ಪ್ರೀಯತಾಂ ॥

॥ ಅಥಾಗ್ನಿಕಾರ್ಯವಿಧಿಃ ॥

ಅಥಾಗ್ನೇಃ ಪಶ್ಚಾತ್ ಪ್ರಾಙ್ಮುಖ ಉಪವಿಶ್ಯ ॥ ಆಚಮ್ಯ ॥ ಪ್ರಾಣಾನಾಯಮ್ಯ ॥ ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ॥ ನರ್ಮದೇ ಸಿಂಧೋ ಕಾವೇರಿ ಜಲೇಽಸ್ಮಿನ್ ಸನ್ನಿಧಿಂಕುರು ॥ ಗಂಗಾದ್ಯಾಃ ಸರ್ವತೀರ್ಥಾಃ ಸನ್ನಿಹಿತಾಃ ಸಂತು ಇತಿ ಕಲಶಂ ಸಮಭ್ಯರ್ಚ್ಯ ॥

ಮಮೋಪಾತ್ತದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಸಾಯಮಗ್ನಿಕಾರ್ಯಂ ಕರಿಷ್ಯೇ ॥ ಇತಿ ಸಂಕಲ್ಪ್ಯ ॥

ಸ್ವಾಹಾ ॥ ಇತ್ಯೇಕಾಂ ಸಮಿಧಮಾಧಾಯ ॥ "ಜುಷಸ್ವನಃ ಸಮಿಧ ಮಗ್ನೇ ಅದ್ಯಶೋಚಾ ಬೃಹದ್ಯಜತಂ ಧೂಮ ಮೃಣ್ವನ್। ಉಪಸ್ಪೃಶದಿವ್ಯ ಗ್‌ಂಸಾನುಸ್ತೂಪೈಃ ಸಗ್‌ಂ ರಶ್ಮಿಭಿಸ್ತತನಃ ಸೂರ್ಯಸ್ಯ ॥ ಇತ್ಯುಪಸ್ಥಾಯ ॥ ಪ್ರದಕ್ಷಿಣ ಮಗ್ನಿಂ ಪರಿಷಿಂಚತಿ ॥ ಅದಿತೇ ನು ಮನ್ಯಸ್ವ ॥ ಇತಿ ದಕ್ಷಿಣತಃ ಪ್ರಾಚೀನಂ ॥ ಅನು ಮತೇನು ಮನ್ಯಸ್ವ ॥ ಇತಿಪಶ್ಚಾದುದೀಚೀನಂ ॥ ಸರಸ್ವತೇ ನು ಮನ್ಯಸ್ವ ॥ ಇತ್ಯುತ್ತರತಃ ಪ್ರಾಚೀನಂ ॥ ದೇವಸವಿತಃ ಪ್ರಸುವ ॥ ಇತಿ ಸಮಂತಂ ಪ್ರದಕ್ಷಿಣಂ ಪರಿಷಿಚ್ಯ ॥

ಅಥಾಗ್ನಿಮಷ್ಟದಿಕ್ಷು ಪ್ರಾಗಾದಿಕ್ರಮೇಣ ಗಂಧಪುಷ್ಪಾಕ್ಷತೈರಲಂಕರೋತಿ ॥ ಓಂ ಅಗ್ನಯೇ ನಮಃ ॥ ಜಾತವೇದಸೇ ನಮಃ ॥ ಸಹೋಜಸೇ ನಮಃ॥ಅಜಿರಾಪ್ರಭವೇ ನಮಃ॥ಯಜ್ಞಾತ್ರಿರಾಧಸೇ ನಮಃ॥ವಿಸರ್ಪಿಣೇ ನಮಃ ॥ ಶ್ರೀ ಯಜ್ಞೇಶ್ವರಾಯನಮಃ ॥ ಗಂಧಪುಷ್ಪಾಕ್ಷತಾನ್ ಸಮರ್ಪಯಾಮಿ ॥ ಇತ್ಯಲಂಕೃತ್ಯ ॥ ಅಗ್ನಿಂ ಪ್ರಜ್ವಲಿತಂ ವಂದೇ ಜಾತವೇದಂ ಹುತಾಶನಂ ॥ ಸುವರ್ಣವರ್ಣಮನಲಂ ಸಮಿದ್ಧಂ ವಿಶ್ವತೋಮುಖಂ ॥

ಓಂ ಚತ್ವಾರಿಶೃಂಗಾತ್ರಯೋ ಅಸ್ಯಪಾದಾ ದ್ವೇ ಶೀರ್ಷೇ ಸಪ್ತಹಸ್ತಾಸೋ ಅಸ್ಯ ॥ ತ್ರಿಧಾ ಬದ್ಧೋ ವೃಷಭೋ ರೋರವೀತಿ ಮಹೋ ದೇವೋ ಮರ್ತ್ಯಾಗ್‌ಂ ಆವಿವೇಶ ॥ ಇತ್ಯಗ್ನಿಂ ಧ್ಯಾತ್ವಾ ॥ ವ್ಯಾಹೃತೀಭಿಶ್ಚತಸ್ರಃಸಮಿಧೋಭ್ಯಾದಧಾತಿ ॥ ಓಂ ಭೂಃ ಸ್ವಾಹಾ ॥ ಅಗ್ನಯ ಇದಂನಮಮ ॥ ಓಂ ಭುವಃ ಸ್ವಾಹಾ ॥ ವಾಯುವ ಇದಂ ನಮಮ ॥ ಓಗ್‌ಂ ಸುವಃ ಸ್ವಾಹಾ ॥ ಸೂರ್ಯಾಯೇದಂ ನ ಮಮ ॥ ಓಂ ಭೂರ್ಭುವಃ ಸುವಃ ಸ್ವಾಹಾ ॥ ಪ್ರಜಾಪತಯ ಇದಂ ನ ಮಮ ॥ ಇತಿಹುತ್ವಾ ॥

ಸ್ವಾಹಾ ॥ ಇತ್ಯೇಕಾಂ ಸಮಿಧಮಾಧಾಯ ॥ ಜುಷಸ್ವನಃ ಸಮಿಧ ಮಗ್ನೇ......ಸೂರ್ಯಃಸ್ಯ ಇತ್ಯುಪಸ್ಥಾಯ ॥ ಪೂರ್ವವತ್ ಪರಿಷಿಂಚತಿ ॥ ಅದಿತೇನ್ವಮಗ್ಗ್ಂಸ್ಥಾಃ ॥ ಅನುಮತೇನ್ವಮಗ್ಗ್ಂಸ್ಥಾಃ ॥ ಸರಸ್ವತೇನ್ವಮಗ್ಗ್ಂ ಸ್ಥಾಃ ॥ ದೇವಸವಿತಃ ಪ್ರಾಸಾವೀಃ ॥ ಇತಿ ॥ ಅಗ್ನಿಮುಪತಿಷ್ಠತೇ ॥ ಓಂ ಯತ್ತೇ ಅಗ್ನೇ ತೇಜಸ್ತೇನಾಹಂ ತೇಜಸ್ವೀಭೂಯಾಸಂ ॥ ಯತ್ತೇ ಅಗ್ನೇ ವರ್ಚಸ್ತೇನಾಹಂ ವರ್ಚಸ್ವೀ ಭೂಯಾಸಂ ॥ ಯತ್ತೇ ಅಗ್ನೇ ಹರಸ್ತೇನಾ ಹಗ್ಂ ಹರಸ್ವೀ ಭೂಯಾಸಂ ॥ ಮಯಿ ಮೇಧಾಂ ಮಯಿ ಪ್ರಜಾಂ ಮಯ್ಯಗ್ನಿಸ್ತೇಜೋದಧಾತು, ಮಯಿ ಮೇಧಾಂ ಮಯಿ ಪ್ರಜಾಂ ಮಯೀಂದ್ರ ಇಂದ್ರಿಯಂ ದಧಾತು, ಮಯಿ ಮೇಧಾಂ ಮಯಿ ಪ್ರಜಾಂ ಮಯಿ ಸೂರ್ಯೋ ಭ್ರಾಜೋದಧಾತು ॥ ಇತಿಪ್ರಾರ್ಥ್ಯ ಮಾನಸ್ತೋಕೇತನಯೇ ಮಾನ ಆಯುಷಿ ಮಾನೋ ಗೋಷು ಮಾನೋ ಅಶ್ವೇಷು ರೀರಿಷಃ ॥ ವೀರಾನ್ಮಾನೋ ರುದ್ರ ಭಾಮಿತೋವಧೀರ್ಹವಿಷ್ಮಂತೋ ನಮಸಾ ವಿಧೇಮತೇ ॥ ಆಗ್ನೇಯಂ ಭಸ್ಮಗೃಹೀತ್ವಾ ಓಜೋಸಿ ಇತಿಲಲಾಟೇ ॥ ಸಹೋಸಿ ॥ ಇತಿಕಂಠೇ ॥ ಬಲಮಸಿ ॥ ಇತಿ ದಕ್ಷಿಣಬಾಹು ಮೂಲೇ ॥ ಭ್ರಾಜೋಸಿ ॥ ಇತಿಕಂಠಪೃಷ್ಠೇ ॥ ದೇವಾನಾಂ ಧಾಮ ನಾಮಾಸಿ ॥ ಇತಿನಾಭೌ ॥ ವಿಶ್ವಮಸಿ ವಿಶ್ವಾಯುಃ ॥ ಇತಿ ಹೃದಯೇ ॥ ಸರ್ವಮಸಿ ಸರ್ವಾಯುರಭಿಭೂಃ ॥ ಇತಿ ಶಿರಸಿಚ ಅಂಗುಷ್ಠೋಪಕನಿಷ್ಠಿಕಾಭ್ಯಾಂ ಧಾರಯೇತ್ ॥ ಅಜ್ಞಾನಾದ್ವಾ ಪ್ರಮಾ ದಾದ್ವಾ ವೈಕಲ್ಯಾತ್ ಸಾಧನಸ್ಯವಾ ॥ ಯನ್ನ್ಯೂನ ಮತಿರಿಕ್ತಂಚ ತತ್ಸರ್ವಂ

ಕ್ಷಂತು ಮರ್ಹಸಿ ॥ ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಂ ॥ ಆಯುಷ್ಯಂ ತೇಜ ಆರೋಗ್ಯಂ ದೇಹಿಮೇ ಹವ್ಯವಾಹನ ॥ ಯಸ್ಯ ಸ್ಮೃತ್ಯಾಚನಾಮೋಕ್ತ್ಯಾ ಪೂಜಾಯಜ್ಞಕ್ರಿಯಾದಿಷು ॥ ನ್ಯೂನಂ ಸಂಪೂರ್ಣತಾಂಯಾತಿ ಸದ್ಯೋ ವಂದೇ ತಮಚ್ಯುತಂ ॥ ಅನೇನ ಸಾಯಮಗ್ನಿಕಾರ್ಯ ಕರ್ಮಣಾ ಶ್ರೀಪರಮೇಶ್ವರಃ ಪ್ರೀಯತಾಂ ॥ ಇತೀಶ್ವರಾರ್ಪಣಂ ಕುರ್ಯಾತ್ ॥ ಪ್ರಾತಃಕಾಲೇ—ಪ್ರಾತರಗ್ನಿಕಾರ್ಯಂ ಕರಿಷ್ಯೇ ॥ ಇತಿ ಸಂಕಲ್ಪಃ ॥ ಪ್ರಾತರಗ್ನಿಕಾರ್ಯ ಕರ್ಮಣಾ ಶ್ರೀಪರಮೇಶ್ವರಃ ಪ್ರೀಯತಾಂ ॥ ಇತೀಶ್ವರಾರ್ಪಣಂ ॥

ಅಥಚತುರ್ಥೇಽಹನಿ ವ್ರತಾಂತೇ ತಮಗ್ನಿ ಮಾತ್ಮನಿ ಸಮಾರೋಪಯತೇ ॥ ಓಂ ಯಾತೇ ಅಗ್ನೇ ಯಜ್ಞಿಯಾ ತನೂಸ್ತಯೇ ಹ್ಯಾರೋಹಾತ್ಮಾತ್ಮಾನಂ ॥ ಅಚ್ಛಾವಸೂನಿ ಕೃಣ್ವನ್ನಸ್ಮೇನರ್ಯಾ ಪುರೂಣಿ ॥ ಯಜ್ಞೋ ಭೂತ್ವಾಯಜ್ಞಮಾಸೀದ ಸ್ವಾಂಯೋನಿಂ ॥ ಜಾತವೇದೋಭುವ ಆಜಾಯಮಾನಃ ಸಕ್ಷಯ ಏಹಿ ॥ ಇತಿಸಮಾರೋಪಣಂ ॥

ಏವಮಾತ್ಮನಿ ಸಮಾರೋಪಿತ ಮಗ್ನಿಂ ಪುನರಗ್ನಿ ಕಾರ್ಯ ಕಾಲೇ— ಓಂ ಉಪಾವರೋಹ ಜಾತವೇದಃ ಪುನಸ್ತ್ವಂ ॥ ದೇವೇಭ್ಯೋ ಹವ್ಯಂ ವಹನಃ ಪ್ರಜಾನನ್ ॥ ಆಯುಃ ಪ್ರಜಾಗ್ಂ ರಯಿಮಸ್ಮಾಸುಧೇಹಿ ॥ ಅಜಸ್ರೋದೀದಿಹಿನೋದುರೋಣೇ ॥ ಭೂರ್ಭುವಸ್ಸುವರೋಂ ಅಗ್ನಿಂ ಪ್ರತಿಷ್ಠಾಪಯಾಮಿ ॥ ಇತಿ ಲೌಕಿಕಾಗ್ನೌ ಅವರೋಪ್ಯ ಅಗ್ನಿಕಾರ್ಯಂ ಕುರ್ಯಾತ್ ॥ ಅಂತೇ ಪುನಃ ಪೂರ್ವವತ್ ಸಮಾರೋಪಣಂ ॥

ವಿ. ಸೂ:— ಈ ಅಗ್ನಿಕಾರ್ಯ ವಿಧಿಯನ್ನು ಉಪನಯನ ವ್ರತದಲ್ಲಿರುವ ಬ್ರಹ್ಮಚಾರಿಗಳನ್ನೇ ಮುಖ್ಯವಾಗಿ ಉದ್ದೇಶಿಸಿ ಬರೆದಿರುವುದರಿಂದ ಸಾಯಂಕಾಲದ ಅಗ್ನಿಕಾರ್ಯವೇ ಮೊದಲು ಬರೆಯಲ್ಪಟ್ಟಿದೆ.

ಈಗ ನಮ್ಮಲ್ಲಿ ಪ್ರಚಾರದಲ್ಲಿರುವ ಗೋತ್ರಪ್ರವರಗಳು

೧. ಕಾಶ್ಯಪಾವತ್ಸಾರನೈಧ್ರುವತ್ರ್ಯಾರ್ಷೇಯ ಪ್ರವರಾನ್ವಿತ ಕಾಶ್ಯಪಗೋತ್ರ:

೨. ಆಂಗೀರಸಬಾರ್ಹಸ್ಪತ್ಯಭಾರದ್ವಾಜೇತಿತ್ರ್ಯಾರ್ಷೇಯ ಪ್ರವರಾನ್ವಿತ ಭಾರದ್ವಾಜ ಗೋತ್ರ:

೩. ವೈಶ್ವಾಮಿತ್ರಾಘಮರ್ಷಣ ಕೌಶಿಕತ್ರ್ಯಾರ್ಷೇಯ ಪ್ರವರಾನ್ವಿತ ವಿಶ್ವಾಮಿತ್ರಗೋತ್ರ:

೪. ಗೌತಮಾಂಗಿರಸಾಯಾಸ್ಯತ್ರ್ಯಾರ್ಷೇಯ ಪ್ರವರಾನ್ವಿತ ಗೌತಮ ಗೋತ್ರ:

೫. ಭಾರ್ಗವ ಚ್ಯಾವನಾಪ್ನವಾನೌರ್ವಜಾಮದಗ್ನ್ಯ ಪಂಚಾರ್ಷೇಯ ಪ್ರವರಾನ್ವಿತ ಜಮದಗ್ನಿ ಗೋತ್ರ:

೬. ಆಂಗಿರಸತ್ರಾಸದಸ್ಯವ ಪೌರುಕುತ್ಸ್ಯತ್ರ್ಯಾರ್ಷೇಯ ಪ್ರವರಾನ್ವಿತಾಂಗಿರಸಗೋತ್ರ:

೭. ವಾಸಿಷ್ಠ ಮೈತ್ರಾವರುಣ ಕೌಂಡಿನ್ಯತ್ರ್ಯಾರ್ಷೇಯ ಪ್ರವರಾನ್ವಿತ ವಸಿಷ್ಠಗೋತ್ರ:

ವಿ. ಸೂ.—ವಿಶ್ವಾಮಿತ್ರ ಗೋತ್ರದವರಲ್ಲಿ ಮಾತ್ರ ಇನ್ನೂ ಬೇರೆ ವಿಧವಾದ ಪ್ರವರಗಳು ನಮ್ಮಲ್ಲಿವೆ. ಅವುಗಳನ್ನು ಆಯಾ ಸಂಪ್ರದಾಯದವರಿಂದಲೇ ತಿಳಿದುಕೊಳ್ಳಬೇಕಷ್ಟೆ.

PRINTED AT
VIJAYA PRINTERS & PUBLISHERS LTD.
MANGALORE